ಕೆಲಸ ಕಾರ್ಯಗಳಲ್ಲಿ ಮಗ್ನಳಾಗಿರುತ್ತಿದ್ದಳು. ಬಂದ ಗ್ರಾಸ್ತನೇನಾದರೂ ತೋಳು ಸರಿಸಿ ಚಾಟಿನಿಂಗನ ಮೇಲೆ ಕೈಎತ್ತುವ ತನಕ ಸಿದ್ರಾಮಕ್ಕ ತನ್ನ ನಿರ್ಲಿಪ್ತ ನೀತಿಯನ್ನು ಬದಲಾಯಿಸುತ್ತಿರಲಿಲ್ಲ. ಅದಕ್ಕಿದ್ದ ಬಲವಾದ ಕಾರಣವೆಂದರೆ ಎಲುಬಿನ ತಟ್ಟಾಗಿದ್ದ ಚಾಟಿನಿಂಗನ ಮೇಲೆ ಯಾವ ಮೂರ್ಖನೂ ಯಾವ ಆಯುಧವನ್ನೂ ಪ್ರಯೋಗಿಸಲಾರನೆಂಬ ತಿಳಿವಳಿಕೆ ಅವಳದಾಗಿತ್ತು. ಆದಾಗ್ಯೂ ಯುದ್ಧನೌಕೆಯೊಂದನ್ನು ಆಯಕಟ್ಟಿನ ಜಾಗಕ್ಕೆ ರವಾನಿಸುವಂತೆ ಒಂದು ಕಣ್ಣನ್ನು ಆ ಕಡೆಗೆ ನಿಗಾ ಮಡಗಿ ತನ್ನ ಕೆಲಸ ಕಾರ್ಯಗಳನ್ನು ನಿಭಾಯಿಸುತ್ತಿದ್ದಳು. ಆದರೆ ಬಂದವನೇನಾದರೂ ಮನೆಯ ಅಂಗಳದಲ್ಲಿರುವ ಕುರಿಮರಿ, ಹೋರಿಕರುವಿನ ಹಗ್ಗಕ್ಕೇನಾದರೂ ಕೈ ಹಾಕಿದ್ದೇ ಆದರೆ ಆ ಕ್ಷಣವೇ ಅದು ಮೂರನೇ ಮಹಾಯುದ್ಧವಾಗಿ ರೂಪಾಂತರ ಪಡೆಯುತ್ತಿತ್ತು. ಸಿದ್ರಾಮಕ್ಕ ಏಕ್‌ದಂ ತನ್ನ ಆರನೆ ಮನೆಯ ತಾರಕಸ್ವರದೊಡನೆ ನೆಗೆದು ನಿಂತಳೆಂದರೆ ಕೇವಲ ಎರಡೇ ನಿಮಿಷದಲ್ಲಿ ಎರಡು ಗಂಟೆಯಿಂದ ನಡೆದ ಜಗಳ ನಿಕಾಲಿಯಾಗಿ ಬರಕಾಸ್ತಾಗುತ್ತಿತ್ತು.

ಜಗಳಕ್ಕೆ ಸಿದ್ರಾಮಕ್ಕನ ಪ್ರವೇಶವಾಯಿತೆಂದರೆ ಅಮೆರಿಕಾವೇ ಯುದ್ಧರಂಗವನ್ನು ನೇರವಾಗಿ ಪ್ರವೇಶಿಸಿದಂತಾಗುತ್ತಿತ್ತು. ಇವತ್ತು ನಮ್ಮೆದುರಿಗೆ ನಡೆಯುತ್ತಿರುವ ಈ ಜೋಯಿಸರ ಮತ್ತು ಚಾಟಿನಿಂಗನ ನಡುವಿನ ಜಗಳ ಸಿದ್ರಾಮಕ್ಕನ ಪಾಲಿಗೆ ಬಡದೇಶವೊಂದರ ಆಂತರಿಕ ವಿಷಯವಾಗಿತ್ತು. ಹಾಗಾಗಿ ಅವಳು ಮೂಕಸಾಕ್ಷಿಯಾಗಿದ್ದಳು.

ಈ ಜಗಳಕ್ಕಿದ್ದ ಮತ್ತೋರ್ವ ಮೂಕಸಾಕ್ಷಿ ಮೂಕವಾಗಿರಲೇಬೇಕಿತ್ತು. ಅದು ಬಾಯಿಯಿಲ್ಲದ ನಾಯಿಯಾದ್ದರಿಂದ ಮೂಕಸಾಕ್ಷಿಯಾಗಿರಬೇಕಾದ ಅನಿವಾರ್ಯವೂ ಅದಕ್ಕಿತ್ತು. ಅದಕ್ಕಿದ್ದ ಮತ್ತೊಂದು ಅನಿವಾರ್ಯವೆಂದರೆ ಅದು ಜೋಯಿಸರ ಮನೆಯ ಸಾಕುನಾಯಿ. ಅದು ಜೋಯಿಸರು ಮನೆಯಿಂದ ಹೊರಹೊರಟರೆ – ಅದು ‘ನೀರುಕಡೆ’ ಆದರೂ ಸೈತ ಸ್ವಲ್ಪ ದೂರ ಅವರ ಹಿಂದೆಯೇ ಹೋಗಿ ಗೌರವ ಸಲ್ಲಿಸಿ ಬರುವ ಕಾಯಕವನ್ನು ನಡೆಸುತ್ತಿತ್ತು.

ಹೀಗೆ ಆ ಕಾಯಕದ ದೂರದ ವ್ಯಾಪ್ತಿಯೊಳಗೇ ಚಾಟಿನಿಂಗನ ಮನೆಯೂ ಇದ್ದುದರಿಂದ ಪ್ರತಿ ಜಗಳಕ್ಕೂ ಈ ನಾಯಿ ಮೂಕಸಾಕ್ಷಿಯಾಗಲೇಬೇಕಿತ್ತು. ಇಂತಹ ಸಂದರ್ಭದಲ್ಲಿ ಬೇರೆ ನಾಯಿಗಳು ತಮ್ಮ ಜೂರಿಸ್‌ಡಿಕ್ಷನ್ನಿನೊಳಗೆ ಹೊರಗಿನ ನಾಯಿಯೊಂದರ

